ಗೊತ್ತುಂಟು. ಕಥೆಯ ಫಾರಂ ಮತ್ತು ಕಾಲಮಾನದ ಒತ್ತಡದ ವಸ್ತುವಿನ ನಿರ್ವಹಣೆ ಅವರನ್ನು ಪ್ರಯೋಗಶೀಲರನ್ನಾಗಿ ಮಾಡಿದವು. ಈ ಕಾಲಮಾನದ ಬದುಕಿನ ಬಹುಸ್ತರದ ಆಯಾಮಗಳನ್ನು ಕಥೆಗಳಲ್ಲಿ ನಿರ್ವಹಿಸಲು ಹೊಸಬರಿಗೆ ಸವಾಲುಗಳಂತೂ ಇದ್ದೇ ಇವೆ. ಕಥೆಯನ್ನು 'ಹೇಳುವಾಗ' ಭಾಷೆಯನ್ನು ಕುದುರಿಸಿಕೊಳ್ಳಬಹುದು, ಆದರೆ ಈ ಹಾದಿಯನ್ನು ಕುಶಲತೆಯ ದಿಕ್ಕಿಗೆ ತಿರುಗಿಸುವಲ್ಲಿ ಅವರಿಗೆ ಸಮಸ್ಯೆಗಳಿವೆ. ಇದರ ನಡುವೆ ಪಾತ್ರಗಳನ್ನು ಮತ್ತು ವಸ್ತುವನ್ನು ವೈವಿಧ್ಯಗೊಳಿಸುವಾಗ ನಿರೂಪಣೆಯಲ್ಲಿ 'ಕಟ್ಟುವಿಕೆ'ಯ ಕೌಶಲ್ಯ ಮೆರೆಯಬೇಕು. ಹೀಗಿದ್ದಾಗ ಕಥೆಯ ಕಾಣ್ಕೆಯನ್ನು ಮಾಗಿಸಬಹುದು; ಕ್ರಿಯಾಶೀಲತೆ ತುಂಬಲು ಸಾಧ್ಯ. ಈಗಿನ ಕಥೆಗಳಲ್ಲಿ ಪ್ರಧಾನವಾಗಿ ವಸ್ತು ವೈವಿಧ್ಯ ಕಾಣುತ್ತೇವೆ. ಆದರೆ, ಬಹುತೇಕರಲ್ಲಿ ಅದಕ್ಕೆ ತಕ್ಕ ಕಾಣ್ಕೆಯನ್ನು ತೀವ್ರವಾಗಿ ತರಲಾಗುತ್ತಿಲ್ಲ. ಬಾಲ್ಯಕಾಲದ ಬಿಸಿಲು, ಮಳೆ, ಸುತ್ತಣ ಮಾತು-ಕಥೆಗಳು, ಕಣ್ಣಿಗೆ ಕಂಡ ಕುತೂಹಲಗಳು, ಸಂಬಂಧ, ದುಗುಡ, ದುಃಖ, ಇವೆಲ್ಲವೂ ಪ್ರತಿ ಕಥೆಗಾರನಿಗೂ ತನ್ನ ಅನುಭವ ಜಗತ್ತಿಗೆ ಪ್ರವೇಶವಾಗುತ್ತವೆ. ಇವು ಕೇವಲ ಕಥೆಗಳಲ್ಲ ಅಥವಾ ಅನುಭವಗಳೂ ಅಲ್ಲ; ಪ್ರತಿಯಾಗಿ ದರ್ಶನಗಳೇ ಆಗುತ್ತವೆ. ಕಥೆಗಾರ ಇವಕ್ಕೆ ಜೋಡಿಸುವ ಮನುಷ್ಯ ಜಗತ್ತು ಗಟ್ಟಿಯಾಗಬೇಕು. ಬಾಲ್ಯದಲ್ಲಿ ಯಾವುದನ್ನು ಕಳೆದುಕೊಳ್ಳುತ್ತೇವೋ ಅದನ್ನು ಕಥೆಯಲ್ಲಿ ಪಡೆಯುವ ಉತ್ಸಾಹವೂ ಇರಬೇಕು. ಯಾವುದೇ ಕಥೆಗಾರ/ಗಾರ್ತಿ ಆರಂಭದ ಬದುಕನ್ನು ತರುವುದು ತಾರುಣ್ಯದಲ್ಲೇ. ಅಲ್ಲಿ ಕೆಲ ಅನುಭವಗಳು ಮಾಗಿರಬಹುದು ಇಲ್ಲವೇ ಮಸುಕಾಗಿರಬಹುದು. ಹಾಗಾಗಿಯೇ ಕಥೆಗಾರನಿಗೆ ವರ್ತಮಾನ ಮತ್ತು ಭೂತಗಳು ಸದಾ ಅಗ್ನಿಕುಂಡಗಳೇ. ಏಕೆಂದರೆ, ಅನುಭವಗಳಿಗೆ ಸೃಜನಶೀಲ ಸ್ಪರ್ಶ ದೊರಕದಿದ್ದರೆ ತಾನಾಗಿಯೇ ಕಳೆಗುಂದುತ್ತವೆ. ನಮ್ಮ ಹಳ್ಳಿ ಪ್ರಜ್ಞೆಯ ಕಥನ ಮನಸ್ಸುಗಳು ಇದನ್ನು ಅರಿಯಬೇಕು. ಇದರಿಂದ ಹೊಸ ದಾರಿಗೆ ಬರುವ ಸವಾಲುಗಳು ಈಗಿನ ಕಥೆಗಾರನಿಗಿದೆ. ಬದುಕಿನ ಅನಿರೀಕ್ಷಿತ ತಿರುವುಗಳು; ಹಳ್ಳಿ-ನಗರಗಳ ಗೆರೆಗಳ ದ್ವಂದ್ವ ಮತ್ತು ಸಂಘರ್ಷ; ಮನುಷ್ಯನ ಮಾನಸಿಕ ಕ್ಷಿಪ್ರ ತಿರುವುಗಳು; ಉದ್ಯೋಗ ಒಡ್ಡುತ್ತಿರುವ ಒತ್ತಡಗಳು; ಮರುರೂಪ ಪಡೆಯುತ್ತಿರುವ ಜಾತಿ ಕ್ರೌರ್ಯಗಳು; ನವ ಅಸ್ಪೃಶ್ಯತೆ; ದೇಶದ ಗಡಿಯನ್ನೂ ಮೀರಿ, ಹೊಸ ಬದುಕಿಗೆ ಒಗ್ಗಿಕೊಳ್ಳಲಾರದ ಜೀವಗಳು; ಧಾರ್ಮಿಕವಾಗಿ ಮತ್ತಷ್ಟು ಕಾಡುತ್ತಿರುವ ಸಮಸ್ಯೆಗಳು; ಬದಲೀ ದೇಹದ ಸಮಸ್ಯೆಗಳು; ವೃತ್ತಿಪಲ್ಲಟ ಮತ್ತು ಸಂಕರಗೊಂಡ ಬದುಕು, ಇವೆಲ್ಲವೂ ಈಗಿನ ಕಥಾಲೋಕವನ್ನು ಆವರಿಸಿವೆ. ಇವುಗಳ ಮೂಲಕ ಮೌಲ್ಯಗಳ ಹುಡುಕಾಟವೂ ಪ್ರಧಾನವೇ ಆಗಿದೆ. ಕಥನಕಲೆಯ ಮುಖೇನ ಎಲ್ಲ ಕಾಲಕ್ಕೂ ಬದುಕನ್ನು ವ್ಯಾಪಕವಾಗಿ ಶೋಧನೆಗೆ ಒಳಪಡಿಸಬೇಕು. ಸಂಬಂಧಗಳು ಬರಿ ಹತಾಶೆಯನ್ನು ಉಂಟುಮಾಡದೇ, ಬದುಕಿನ ಸಣ್ಣ ಕಾಣ್ಕೆಯನ್ನಾದರೂ ಅನಾವರಣ ಮಾಡಬೇಕು. ಮೇಲಿನ ಕಾಳಜಿಗಳನ್ನು ಅಭಿವ್ಯಕ್ತಿಸುವ ವಿಧಾನಗಳು ಹೊಸಬರಲ್ಲಿ ಭಿನ್ನತೆಯನ್ನು ಧರಿಸಿವೆ. ಆದರೆ, ಕೆಲವು ಆಶಯಗಳು ಪುನರಾವರ್ತಿತಗೊಂಡಂತೆ ಕಂಡರೆ ಆಶ್ಚರ್ಯವಲ್ಲ. ಇದಕ್ಕೆ ಓದಿನ ಮತ್ತು ಅನುಭವದ ಕೊರತೆಯೂ ಕಾರಣವಾಗಿದೆ. ಕಾಲ ಮತ್ತು ಬದುಕಿನ ಪಲ್ಲಟಗಳು ಈಗಿನ ಕಥೆಗಳ ಮುಖ್ಯ ದಾರಿ. ಹೊಸ ಬಗೆಯ ಬದುಕಿನ ತತ್ವಗಳ ಶೋಧವಿದೆಯಾದರೂ, ಅನೇಕರು ಇದರ ಸೂಕ್ಷ್ಮಗಳನ್ನು ಅರಿಯುವುದು ಅಗತ್ಯ. ಯಾವ ಸಂಬಂಧಗಳೂ ಪರಿಪೂರ್ಣವಲ್ಲ; ಅವುಗಳ ಪೂರ್ಣತೆಯನ್ನು ಭಾವುಕತೆಯ ನೆಲೆಯಲ್ಲಿ ಹಾಗೂ ಹುಡುಕಾಟದ ಆಯಾಮದಲ್ಲಿ ತರಬೇಕಾಗುತ್ತದೆ. ಕಥೆ ಕೇವಲ ಪಾತ್ರಗಳನ್ನು ಪರಿಚಯಿಸುವುದಲ್ಲ, ಘಟನೆಗಳನ್ನು ಬರೀ 'ಹೇಳುವುದೂ' ಅಲ್ಲ, ವಿವರಗಳನ್ನು ತುಂಬುವುದೂ ಅಲ್ಲ. ಇವುಗಳನ್ನು ಭಾಷಿಕಲೋಕದ ಮೂಲಕ ಒಂದು ವ್ಯವಸ್ಥೆಗೆ ತರಬೇಕಾಗುತ್ತದೆ. ಇಚ್ಛಿತ ಬದುಕಿನ ತತ್ವಗಳಿಗೆ ದರ್ಶನದ ಜೀವವನ್ನು ತುಂಬಬೇಕಾಗುತ್ತದೆ. ಅನೇಕರು ಪಾತ್ರಗಳನ್ನು ಬರೀ ಪರಿಚಯಿಸುವ ಹಂತದಲ್ಲೇ ಕಥೆಗಳನ್ನು ಕೊನೆಗೊಳಿಸುತ್ತಾರೆ; ಇಲ್ಲವೇ ಕಥೆಯನ್ನು ಬರೀ 'ಹೇಳುತ್ತಾರೆ'. ನಿರೂಪಕ ತಾನು ಹೊರಗೆ ನಿಲ್ಲುವುದು ಯಾವಾಗ? ಒಳಗೆ ತಾಕುವುದು ಹೇಗೆ? ಎಂಬುದನ್ನು

